IX ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಕೊಳವೆಬಾವಿಗಳ ಪಂಪನ್ನು ರಿಪೇರಿ ಮಾಡುವುದು

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ಮಾನವ ಬದುಕಲು ಅವಶ್ಯಕವಾಗಿ ಬೇಕಾದ ನೀರು ಒದಗಿಸಲು ಸರ್ಕಾರದವರು ಹೆಚ್ಚು ಆದ್ಯತೆ ಕೊಡುವ ದೃಷ್ಟಿಯಿಂದ ಪ್ರತ್ಯೇಕ ಗ್ರಾಮಾಂತರ ನೀರು ಸರಬರಾಜು ಇಲಾಖೆ ರಚಿಸಿ ಅದಕ್ಕೆ ಸಿಬ್ಬಂದಿಯನ್ನು ಕೊಡಲಾಗಿದೆ. ಇದಕ್ಕಾಗಿ ಕೋಟಿಗಟ್ಟಲೆ ಹಣ ಖರ್ಚು ಮಾಡಲಾಗುತ್ತಿದೆ. ಅದಕ್ಕೆ ಕೊರೆದ ಬಾವಿಗಳಿಗೆ ಹ್ಯಾಂಡ್ ಪಂಪ್ ಇಲ್ಲ. ಕೆಟ್ಟುಹೋದರೆ ಶೀಘ್ರವಾಗಿ ರಿಪೇರಿ ಮಾಡುವುದಿಲ್ಲ. ನೀರು ಇಲ್ಲದೆ ಇರುವ ಗ್ರಾಮಗಳಿಗೆ ಕೊಳವೆ ಬಾವಿ ಕೇಳಿದರೆ ಬಾವಿ ಮಂಜೂರು ಮಾಡುವುದಿಲ್ಲ. ನನ್ನ ಕ್ಷೇತ್ರದಲ್ಲಿ ಕೊರೆದ ಸುಮಾರು ೩೦ಕ್ಕೂ ಹೆಚ್ಚು ಬೋರ್ ವೆಲ್‌ಗಳಿಗೆ ಹ್ಯಾಂಡ್ ಪಂಪ್ ಹಾಕದೆ ಕಳೆದ ಆರು ತಿಂಗಳುಗಳಿಂದ ಜನರು ಕುಡಿಯುವ ನೀರಿಗಾಗಿ ಬಹಳ ಕಷ್ಟಪಡುವಂತಾಗಿದೆ. ನನ್ನ ಕ್ಷೇತ್ರದ ಕಿಬ್ಬನಹಳ್ಳಿ ಸೋರಲಮಾವು ಗ್ರಾಮ ಮತ್ತು ರಾಯಪ್ಪನ ಪಾಳ್ಯ, ಪಟ್ಟ, ಕಿಬ್ಬನಹಳ್ಳಿ ಹೋಬಳಿ ದೊಡ್ಡಯ್ಯನಪಾಳ್ಯ, ಚಿಕ್ಕರಾಂಪುರ ಗ್ರಾಮಗಳಲ್ಲಿ ಹಾಗೂ ಇತರ ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಈ ಇಲಾಖೆಯ ಯಂತ್ರಗಳು ಮತ್ತು ಕೊರೆಯುವ ಬಾವಿಗಳ ಆಳ ಯಾರಿಗೂ ಸಿಗದಾಗಿದೆ. ನನ್ನ ಕ್ಷೇತ್ರದಲ್ಲಿ ಅಗತ್ಯವಾಗಿ ಕುಡಿಯುವ ನೀರು ಇಲ್ಲದ ಗ್ರಾಮಗಳಿಗೆ ಬಾವಿ ಕೆಟ್ಟಿರುವ ಪಂಪುಗಳ ರಿಪೇರಿ, ಹ್ಯಾಂಡ್ ಪಂಪು ಇಲ್ಲದ ಬಾವಿಗಳಿಗೆ ಹ್ಯಾಂಡ್ ಪಂಪು ಮತ್ತು ಇತರ ರಿಪೇರಿಗಳನ್ನು ಮಾಡುವುದಿಲ್ಲದೆ ಪಿ.ಎಸ್.ಐ. ಮೊದಲಾದ ಸಂಸ್ಥೆಗಳಿಂದ ಕೊರೆಯಲ್ಪಟ್ಟ ಬಾವಿಗಳ ರಿಪೇರಿಯನ್ನು ಪಿ.ಎಚ್.ಇ. ಯವರು ಮಾಡುವಂತೆ ಆದೇಶ ನೀಡಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ. ಆಲ್ಲದೇ ಈ ಬಗ್ಗೆ ಮಂತ್ರಿಗಳು ಫೋನ್ ಮಾಡಿ ತಿಳಿಸಿದ್ದರೂ ಕೂಡಾ ಇದುವರೆವಿಗೂ ಕೊಳವೆ ಬಾವಿಗಳನ್ನು ರಿಪೇರಿ ಮಾಡಿರುವುದಿಲ್ಲ. ಈ ಬಗ್ಗೆ ತ್ವರಿತ ಕಾರ್ಯಕ್ರಮ ಕೈಗೊಳ್ಳಬೇಕಾಗಿ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೇ, ಈ ಬಗ್ಗೆ ವಿವರವನ್ನು ತರಿಸಿಕೊಡುತ್ತೇನೆ.

X ಕುಂದಾಪುರ ಹಾಗೂ ಮುಂಡ್ಕೇಶ್ವರದ ನಡುವೆ ವಿದ್ಯುಚ್ಛಕ್ತಿ ಸಬ್ ಸ್ಟೇಷನ್ ಇಲ್ಲದಿರುವುದು

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಮತ್ತು ಉತ್ತರಕನ್ನಡ ಜಿಲ್ಲೆಯ ಮುರ್ಡೇಶ್ವರಗಳ ನಡುವೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ಇನ್ನೊಂದು ಸಬ್ ಸ್ಟೇಷನ್ ಇಲ್ಲದ ಪ್ರಯುಕ್ತ ಕುಂದಾಪುರ ತಾಲ್ಲೂಕಿನ ಶಿರೂರು, ಬೈಂದೂರು, ಪಡುವರಿ, ಯಕ್ಕರೆ, ಉಪ್ಪುಂದ, ಕೆರ್ಗಾಲ್, ಕಂಬದ ಕೋಣೆ ತನಕ ಭಟ್ಕಳದಿಂದ ವಿದ್ಯುತ್ ಸರಬರಾಜು ಆಗುತ್ತಿದ್ದು ಈ ಪ್ರವಾಹ ಶೀರ ದುರ್ಬಲವಾಗಿರುವುದರಿಂದ ಕೆಲವೆಡೆ ದೀಪಗಳು ಮಂಕಾಗಿ, ಪಂಪು ಸೆಟ್ಟುಗಳು ಚಲಿಸದೆ ರೈತರಿಗೂ ಗ್ರಾಹಕರಿಗೂ ಅನೇಕ ವರ್ಷಗಳಿಂದ ತೊಂದರೆಯಾಗಿದೆ. ಇತ್ತೀಚಿನ ತಿಂಗಳುಗಳಲ್ಲಿ ಭಟ್ಕಳ ಕಡೆಯ ವಿದ್ಯುತ್ ಲೈನ್‌ಗೆ ತೊಂದರೆ ಸಂಭವಿಸಿದಾಗ ಬೈಂದೂರಿನತನಕ ಮಾತ್ರ ಕುಂದಾಪುರದಿಂದ ವಿದ್ಯುತ್ ಪೂರೈಸಲಾಗುತ್ತಿದೆ. ಪರಿಣಾಮವಾಗಿ ಸುಮಾರು ಹತ್ತು ಸಾವಿರ ಜನಸಂಖ್ಯೆ ಇರುವ ಶಿರೂರು ಗ್ರಾಮಕ್ಕೆ ರಾತ್ರಿ ಇಡೀ ವಿದ್ಯುತ್ ಪೂರೈಕೆ ಇಲ್ಲದೆ ದೀಪವಿಲ್ಲದ ದ್ವೀಪವಾಗುತ್ತದೆ. ಶಿರೂರು, ಕತ್ತಲೆಯ ಕೂಪವಾಗುತ್ತದೆ. ನಿರಂತರವಾಗಿ ಸಂಭವಿಸುವ ಈ ಲೋಪ, ಗ್ರಾಹಕರ ಮೇಲೆ ಎಸಗುವ ಅತ್ಯಂತ ಬೇಜವಾಬ್ದಾರಿಯುತ ಕ್ರಿಯೆಯಾಗಿದ್ದು ಇದನ್ನು ಕೂಡಲೇ ಸರಿಪಡಿಸಬೇಕು ಮತ್ತು ಸುಯೋಗ್ಯ ವಿದ್ಯುತ್ ಪೂರೈಕೆಗಾಗಿ ಹೊಸ ವಿದ್ಯುತ್ ಸಬ್‌ಸ್ಟೇಷನ್‌ನನ್ನು ಕುಂದಾಪುರ ಮುರ್ಡೇಶ್ವರಗಳ ನಡುವೆ ಬೈಂದೂರು ಕ್ಷೇತ್ರದಲ್ಲಿ ಸ್ಥಾಪಿಸಬೇಕು ಎಂದು ಆಗ್ರಹ ಪೂರ್ವಕವಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ವರದಿ ತರಿಸಿಕೊಡುತ್ತೇನೆ.

XI ಶಿಕಾರಿಪುರ ತಾಲ್ಲೂಕು ತಡಗಳಿಗೆ ಹತ್ತಿರ ಚಿಲ್ಲಿಂಗ್ ಪ್ಲಾಟ್‌ನ್ನು ಪ್ರಾರಂಭಿಸದೆ ಇರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಶಿಕಾರಿಪುರ ತಾಲ್ಲೂಕು ತಡಗಣಿ ಹತ್ತಿರ ಚಿಲ್ಲಿಂಗ್ ಪ್ಲಾಂಟ್ ಪ್ರಾರಂಭಿಸುವ ದೃಷ್ಟಿಯಿಂದ ಲೋಕೋಪಯೋಗಿ ಇಲಾಖೆಯವರು ಕಟ್ಟಡದ

ಕೆಲಸ ಪೂರ್ಣ ಮಾಡಿದ್ದು ಈಗ್ಗೆ ೫–೬ ತಿಂಗಳ ಹಿಂದೆಯೆ ಶಿವಮೊಗ್ಗ ವಿಶೇಷ ಜಿಲ್ಲಾಧಿಕಾರಿಗಳು ಅದಕ್ಕೆ ಅಗತ್ಯವಾಗಿ ಜಿಲ್ಲಾಧಿಕಾರಿಗಳು ಕೊಡಬೇಕಾದ ಪಾಲಿನ ಹಣ ಕೊಟ್ಟಿದ್ದು ಈವರೆಗೆ 'ಚಿಲ್ಲಿಂಗ್ ಪ್ಲಾಂಟ್' ಪ್ರಾರಂಭಿಸಿರುವುದಿಲ್ಲ. ಈ ಭಾಗದ ಜನ ೨೫–೩೦ ವರ್ಷದಿಂದ ಬರಗಾಲಕ್ಕೆ ತುತ್ತಾಗಿದ್ದು ಸಾವಿರಾರು ಜನ ಕಡು ಬಡವರಿಗೆ ಎಮ್ಮೆಗಳನ್ನು ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಿಂದ ಕೊಡಿಸಿದ್ದು ಆ ಬಡವರ ಶ್ರಮ ವ್ಯರ್ಥವಾಗಿ ತಪ್ಪಿಸಬೇಕಾದರೆ ತಕ್ಷಣ ಈ ಚಿಲ್ಲಿಂಗ್ ಪ್ಲಾಂಟ್ ಪ್ರಾರಂಭಿಸುವ ದೃಷ್ಟಿಯಿಂದ ಸರಕಾರ ಏನು ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯ ಬಯಸುತ್ತೇನೆ.

ಶ್ರೀ ಕೆ. ಎಂ ಕೃಷ್ಣಾರೆಡ್ಡಿ.—ಈ ಬಗ್ಗೆ ಮಾಹಿತಿಯನ್ನು ತರಿಸಿ ನಾಳೆ ಸಭೆಯಲ್ಲಿ ಉತ್ತರ ಒದಗಿಸುತ್ತೇನೆ.

XII ಕೊಡಗಿನಲ್ಲಿ ಏಲಕ್ಕಿಗೆ ಕಟ್ಟೆರೋಗ ಬಂದಿರುವುದರಿಂದ ರೈತರ ಅಲ್ಪಾವಧಿ ಸಾಲವನ್ನು ದೀರ್ಘಾವಧಿಯಾಗಿ ಪರಿವರ್ತಿಸುವುದು

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ಕೊಡಗಿನ ಎಲ್ಲಾ ಕಡೆ ಏಲಕ್ಕಿಗೆ ಕಟ್ಟೆರೋಗ ಬಂದು ಏಲಕ್ಕಿ ತೋಟಗಳೆಲ್ಲ ಹಾಳಾಗಿ ಏಲಕ್ಕಿ ಬೆಳೆಗಾರರು ಬಹಳ ತೊಂದರೆಗೀಡಾಗಿದ್ದಾರೆ. ಅವರು ಸಹಕಾರ ಸಂಘಗಳಿಂದ ಪಡೆದುಕೊಂಡಿರುವ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದೆ ಅವರ ಆರ್ಥಿಕ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಅರಣ್ಯ, ಸಹಕಾರ ಮಂತ್ರಿಗಳು ದಿನಾಂಕ ೨೦–೫–೧೯೮೬ರಲ್ಲಿ ಕೊಡಗಿನ ಶಾಂತಳ್ಳಿ ವಿಭಾಗಕ್ಕೆ ಭೇಟಿ ಕೊಟ್ಟು ಅಲ್ಲಿಯ ಜನತೆಗೆ ಸಾಲವನ್ನು ಶಾರ್ಟ್ ಟರ್ಮ್ ಸಾಲದಿಂದ ಮೀಡಿಯಂ ಟರ್ಮ್ ಸಾಲವಾಗಿ ಪರಿವರ್ತಿಸುವ ಬಗ್ಗೆ ಭರವಸೆ ಕೊಟ್ಟು ಬಂದಿರುತ್ತಾರೆ. ಆದರೆ ಈತನಕ ಅವರಿಗೆ ಕೊಟ್ಟ ಈ ಭರವಸೆಯನ್ನು ಏಕೆ ಈಡೇರಿಸಲಿಲ್ಲ ಮತ್ತು ಅವರಿಗೆ ಸಾಲದ ರಿಯಾಯಿತಿಯಲ್ಲಿ ಶಾರ್ಟ್ ಟರ್ಮ್ ಸಾಲವನ್ನು ಮೀಡಿಯಂ ಟರ್ಮ್ ಸಾಲವನ್ನಾಗಿ ಪರಿವರ್ತಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ನಾನು ಮತ್ತು ಅರಣ್ಯ ಮಂತ್ರಿಗಳು ಶಾಂತಳ್ಳಿಗೆ ಹೋಗಿದ್ದುದು ನಿಜ. ಅಲ್ಲಿ ಏಲಕ್ಕಿ ಹಾಳಾಗಿರುವುದು ನಿಜ. ಆದರೆ ಅದಕ್ಕೆ ಒಂದು ಶಿಸ್ತು ಇದೆ. ಜಿಲ್ಲಾಧಿಕಾರಿಗಳು ೬ ಆಣಿಗಿಂತ ಕಡಿಮೆ ಬೆಳೆ ಬಂದಿದೆ ಎಂದು ರಿಪೋರ್ಟ್ ಕಳುಹಿಸಬೇಕು. ಅದರ ಮೇಲೆ ನಬಾರ್ಡ್‌ನವರಿಗೆ ಹೇಳಿ ಅದನ್ನು ಕನ್ವರ್ಟ್ ಮಾಡಿ ಫರ್ದರ್ ಲೋನ್ ಕೊಡಿ ಎಂದು ಹೇಳಬಹುದು. ಆದರೆ ಅದು ಬರಲಿಲ್ಲ. ಮತ್ತೆ ಶಾಂತಳ್ಳಿಯಲ್ಲಿ ಏನು ಸಾಲ ಔಟ್ ಸ್ಯಾಂಡಿಂಗ್ ಇದೆ ಅದರಲ್ಲಿ ೩೦ ಪರ್ಸೆಂಟ್ ಏಲಕ್ಕಿಗೂ ೭೦ ಪರ್ಸೆಂಟ್‌ನಷ್ಟು ಭತ್ತಕ್ಕೂ ಸಾಲವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಅವರು ಭತ್ತಕ್ಕೆ ತೆಗೆದುಕೊಂಡಿದ್ದ ಸಾಲವನ್ನಾದರೂ ವಾಪಸ್ಸು ಕೊಟ್ಟಿದ್ದರೆ ಚೆನ್ನಾಗಿತ್ತು. ಈಗ ಅದೂ ಇಲ್ಲ, ಇದೂ ಇಲ್ಲವಾಗಿದೆ. ಆರಣೆಗಿಂತ ಬೆಳೆ ಕಡಿಮೆಯಾಗಿದೆಯೆಂದು ಜಿಲ್ಲಾಧಿಕಾರಿಗಳು ರಿಪೋರ್ಟ್ ಕೊಟ್ಟರೆ ಅದರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ. ಈ ಬಗ್ಗೆ ಮಾನ್ಯ ಸದಸ್ಯರು ಕಾರ್ಯತತ್ಪರರಾಗಬೇಕು. ಜೊತೆಗೆ ನಾನೂ ಕೂಡಾ ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಕಾಗದವನ್ನು ಬರೆಯುತ್ತೇನೆ.

XIII ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಿಕ್ಷಾಗಳಿಗೆ ಬೆಲೆ ಬಾಳುವ ಮೀಟರ್‌ನ್ನು ಅಳವಡಿಸಲು ಸರ್ಕಾರ ಒತ್ತಾಯಿಸಿರುವುದು

ಶ್ರೀಮತಿ ಮನೋರಮಾ ಮಧ್ವರಾಜ್ ಮತ್ತು (ಶ್ರೀ ವಸಂತ ವಿ. ಸಾಲ್ಯಾನ್).—ಮಾನ್ಯ ಅಧ್ಯಕ್ಷರೆ, ಆಟೋ ರಿಕ್ಷಾಗಳಿಗೆ ಮೀಟರ್ ಅಳವಡಿಸಬೇಕೆಂದು ಹಿಂದೆ ಸರ್ಕಾರ ನಿಬಂಧನೆ ಹಾಕಿದಾಗ ಚಾಲಕರು ಮತ್ತು ಮಾಲೀಕರು ವಿರೋಧಿಸದೆ ಮೀಟರ್ ಅಳವಡಿಸಿದರು. ಆಗ ಒಪ್ಪಿದ ಮೀಟರ್‌ನ್ನು ಈಗ ಒಪ್ಪದೆ ಟ್ಯಾಕ್ಸಿಗಳಿಗೆ ಹಾಕುವಂತಹ ದೊಡ್ಡ ಮೀಟರ್ (ಫ್ಲ್ಯಾಗ್ ಮೀಟರ್) ಹಾಕಬೇಕೆಂದೂ ಇಲ್ಲವಾದರೆ ರಿಕ್ಷಾ ಪರ್ಮಿಟ್ ನವೀಕರಣವಾಗುವುದಿಲ್ಲವೆಂದೂ ಸರ್ಕಾರ ಆಜ್ಞೆ ಮಾಡಿದೆ. ಪ್ರಯಾಣ ಮಾಡಿದ್ದಕ್ಕೆ ಸರಿಯಾದ ದರವನ್ನು ತೋರಿಸಲು ಸುಮಾರು ೩೦೦–೪೦೦ ರೂಪಾಯಿಗಳ ಕ್ರಯದ ಸಣ್ಣ ಮೀಟರು ಇಷ್ಟು ಕಾಲ ಜೋಡಿಸಿರುವಾಗ ಈಗ ಸುಮಾರು ೨೦೦೦ ದಿಂದ ೨೫೦೦ ರೂಪಾಯಿಗಳ ಕ್ರಯದ ದೊಡ್ಡ ಮೀಟರ್ ಅಳವಡಿಸುವುದಕ್ಕೆ ಆಜ್ಞೆ ಮಾಡಿರುವುದರ ಔಚಿತ್ಯವೆನು? ಬಡ ಸ್ವಲ್ಪುದ್ಯೋಗಿಗಳಿಗೆ ನೆರವಾಗುವುದರ ಬದಲು ದೊಡ್ಡ ಮೀಟರ್ ತಯಾರಿಕರಿಗೆ ಗಿರಾಕಿ ಒದಗಿಸುವುದರಲ್ಲಿ ಒಳಗುಟ್ಟೇನು? ರಾಜ್ಯದಲ್ಲಿ ಸಮತಟ್ಟಾಗಿಲ್ಲದ ರಸ್ತೆಗಳಿರುವ ಮಲೆನಾಡು ಭಾಗದಲ್ಲಿ